ಈ ಪ್ರದೇಶದಲ್ಲಿ ರೀಲಿಂಗ್ ಘಟಕವನ್ನು ಸ್ಥಾಪಿಸಲು ಮುಂದೆ ಬಂದಲ್ಲಿ ರೀಲಿಂಗ್ ಉದ್ದಿಮೆದಾರರಿಗೆ ಸಹಾಯ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಪ್ರೋತ್ಸಾಹಿಸಿ ಮಾರುಕಟ್ಟೆ ಅಭಿವೃದ್ಧಿಪಡಿಸಲು ಉದ್ದೇಶಿಸಿದೆ.

ಇ) ಈ ಮಾರಾಟ ಕೇಂದ್ರದಲ್ಲಿ ತಾಂತ್ರಿಕ ಸೇವಾ ಕೇಂದ್ರ ಲಿಂಗಸುಗೂರು ಕಾರ್ಯ ನಿರ್ವಹಿಸುತ್ತಿದೆ. ಇದರ ಚಟುವಟಿಕೆಗಳು ಕೆಳಕಂಡಂತಿದೆ.

1. ರೇಷ್ಮೆ ಕೃಷಿ ವಸ್ತು ಪ್ರದರ್ಶನ ಏರ್ಪಡಿಸುವುದು.

2. ಹೊಸದಾಗಿ ರೇಷ್ಮೆ ಕೃಷಿ ಕೈಗೊಳ್ಳುವ ರೈತರಿಗೆ ತರಬೇತಿ ನೀಡುವುದು.

3. ವಿವಿಧ ಯೋಜನೆಗಳಡಿ ದೊರಕುವ ಸಹಾಯ ಸೌಲಭ್ಯಗಳನ್ನು ಒದಗಿಸುವುದು. ಇತ್ಯಾದಿ

ಅಂತರ್ಜಲ ಮಟ್ಟ ಕುಸಿದಿರುವುದು

1308(1570); ಶ್ರೀ ಮಾನಪ್ಪ ಡಿ. ವಜ್ಜಲ್

ಅ) ಲಿಂಗಸುಗೂರು ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟ ಕುಸಿತದಿಂದಾಗಿ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರವು ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)?

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) ಗಮನಕ್ಕೆ ಬಂದಿದೆ.

ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲ್ಲೂಕಿನಲ್ಲಿ 18 ಅಧ್ಯಯನ ಕೊಳವೆ ಬಾವಿಗಳಲ್ಲಿ ಮಾಹೆಯಾನ ದಾಖಲಿಸಿದ ಅಂತರ್ಜಲ ಮಟ್ಟ ಆಧರಿಸಿ 10 ವರ್ಷದ ಸರಾಸರಿ ಅಂತರ್ಜಲ ಮಟ್ಟದ ವಿವರವನ್ನು ಕೆಳಕಾಣಿಸಿದೆ.

ಕ್ರ ಸಂ	ಜಿಲ್ಲೆ	ತಾಲ್ಲೂಕು	ವರ್ಷ (ಜನವರಿ ಯಿಂದ ಡಿಸೆಂಬರ್)	ಸರಾಸರಿ ನೀರಿನಜಲಮಟ್ಟ (ಮೀಟರ್ ಗಳಲ್ಲಿ)
1.			2004	8.55
2.	ರಾಯಚೂರು	ಲಿಂಗಸೂಗೂರು	2005	7.97
3.			2006	6.33
4.			2007	5.00
5.			2008	4.45
6.			2009	4.44
7.			2010	4.13
8.			2011	4.73
9.			2012	5.46
10.			2013	5.44

2004 ರಿಂದ 2013 ಡಿಸೆಂಬರ್ ಅಂತ್ಯದವರೆಗಿನ ಸರಾಸರಿ ಜಲಮಟ್ಟ ಮಾಪನಗಳನ್ನು ತುಲನೆ ಮಾಡಿದಾಗ ಅಂತರ್ಜಲ ಮಟ್ಟ ಹೆಚ್ಚಿಗೆ ಆಗಿರುವುದು ಕಂಡುಬಂದಿದೆ.

2004 ರಲ್ಲಿ ಸರಾಸರಿ ಅಂತರ್ಜಲ ಮಟ್ಟ 8.55 ಮೀಟರ್‌ಗಳಿದ್ದು, 2013ರಲ್ಲಿ 5.44 ಮೀಟರ್‌ಗಳಿದ್ದು 3.11 ಮೀಟರ್ ಏರಿಕೆ ಕಂಡು ಬಂದಿರುತ್ತದೆ.

ಆ) ಸಣ್ಣ ನೀರಾವರಿ ಇಲಾಖೆಯಿಂದ ಅಂತರ್ಜಲ ಮಟ್ಟ ಹೆಚ್ಚಿಸುವ ನಿರ್ದಿಷ್ಟವಾದ ಕಾಮಗಾರಿಗಳು ಇರುವುದಿಲ್ಲ. ಆದರೆ ಈ ಇಲಾಖೆಯಿಂದ ಕೈಗೊಂಡಿರುವ ಜಿನುಗು ಕೆರೆ, ಅಣೆಕಟ್ಟು/ಪಿಕಪ್/ಚೆಕ್ ಡ್ಯಾಂಗಳಂತಹ ಯೋಜನೆಗಳು ಅಂತರ್ಜಲ ಮಟ್ಟ ಹೆಚ್ಚಿಸುವಲ್ಲಿ ಸಹಕಾರಿಯಾಗುವುವು.

ಲಿಂಗಸೂಗೂರು ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ 8 ಜಿನುಗು ಕೆರೆಗಳು ಹಾಗೂ 13 ಪಿಕಪ್/ಬ್ಯಾರೆಜ್‌ಗಳು ಅಸ್ತಿತ್ವದಲ್ಲಿರುವುವು.

ಪ್ರಸ್ತುತ ವರ್ಷ ಸಣ್ಣ ನೀರಾವರಿ ಇಲಾಖೆಗೆ "ಪ್ರಧಾನ ಕಾಮಗಾರಿಗಳು" ಲೆಕ್ಕ ಶೀರ್ಷಿಕೆಯಡಿ ಒದಗಿಸಲಾದ ಅನುದಾನದಲ್ಲಿ ಲಿಂಗಸೂಗೂರು ತಾಲ್ಲೂಕಿನಲ್ಲಿ ₹ 100.00ಲಕ್ಷ ಅಂದಾಜು ವೆಚ್ಚದಲ್ಲಿ 2 ಪಿಕಪ್‌ಗಳ ನಿರ್ಮಾಣಕ್ಕಾಗಿ ₹ 33.34ಲಕ್ಷ ಅನುದಾನ ಒದಗಿಸಲಾಗಿದೆ.

ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟದಲ್ಲಿ ಗಣನೀಯ ಕುಸಿತ ಇರುವುದಿಲ್ಲ. ಆದ್ಯಾಗ್ಯೂ 2013–14ನೇ ಸಾಲಿನಲ್ಲಿ ಇಲಾಖೆಯ ಜಿಲ್ಲಾ ಕಛೇರಿಯಿಂದ ಅಂತರ್ಜಲವನ್ನು ಅಭಿವೃದ್ಧಿಪಡಿಸಲು ಅಂತರ್ಜಲ ಕೃತಕ ಮರುಪೂರೈಕೆ ರಚನೆಯಾದ ಚೆಕ್‌ಡ್ಯಾಂ ನಿರ್ಮಾಣದ ಸಂಬಂಧ site Specific ಸ್ಥಳಾಯ್ಕೆ ಮಾಡಿ ಕಾರ್ಯನಿರ್ವಾಹಕ ಅಭಿಯಂತರರು ಸಣ್ಣ ನೀರಾವರಿ ಇಲಾಖೆ ರವರ ಮುಖಾಂತರ ನಿರ್ಮಿಸಲಾಗುತ್ತಿದೆ.

ಚೆಕ್‌ಡ್ಯಾಂಗಳ ವಿವರ

ಕ್ರ. ಸಂ	ಜಿಲ್ಲೆ	ತಾಲ್ಲೂಕು	ಚೆಕ್‌ಡ್ಯಾಂಗಳ ಸಂಖ್ಯೆ	ಚೆಕ್ ಡ್ಯಾಂ ನಿರ್ಮಾದ ವಿವರ	ಅನುದಾನ (₹ ಲಕ್ಷಗಳಲ್ಲಿ)
1.	ರಾಯಚೂರು	ಲಿಂಗಸೂಗೂರು	1	ಮತ್ತೂರು	2.50
2.			1	ಬಗಡಿ ತಾಂಡ	